ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಜಲಸಂವರ್ಧನೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್‌ನಿಂದ ಬಂದ ಹಣ

271 (1499) ಶ್ರೀ ಶ್ರೀನಿವಾಸಗೌಡ ಕೆ. (ಕೋಲಾರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಲ ಸಂವರ್ಧನೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್‌ನಿಂದ ಬಂದಿರುವ ಹಣ ಎಷ್ಟು;

ಆ) ಇದುವರೆವಿಗೂ ಈ ಯೋಜನೆಯಿಂದ ತೆಗೆದುಕೊಂಡ ಕೆರೆಗಳು ಎಷ್ಟು;

ಇ) ಈವರೆವಿಗೂ ಎಷ್ಟು ಕೆರೆಗಳು ಪೂರ್ತಿ ಅಭಿವೃದ್ಧಿ ಹೊಂದಿವೆ;

ಈ) ಸರ್ಕಾರ ಈ ಯೋಜನೆಗಾಗಿ ವಿಶ್ವಬ್ಯಾಂಕಿನಿಂದ ಮತ್ತೆ ಹಣವನ್ನು ಕೇಳಿದೆಯೇ;

ಉ) ಕೇಳಿದ್ದಲ್ಲಿ ಎಷ್ಟು ಹಣವನ್ನು ಕೇಳಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ವಿಶ್ವಬ್ಯಾಂಕ್‌ನಿಂದ ಮಂಜೂರಾದ ಮೂಲ ಯೋಜನಾ ಮೊತ್ತ ರೂ. 670.59 ಕೋಟಿಗಳು. ಪರಿಷ್ಕೃತ ಯೋಜನಾ ಮೊತ್ತ ರೂ.508.63 ಕೋಟಿಗಳು.

ಆ) ಇದುವರೆಗೆ 1290 ಕೆರೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) 530 ಕೆರೆಗಳನ್ನು ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ.

ಈ) ವಿಶ್ವಬ್ಯಾಂಕ್‌ನೊಂದಿಗೆ ಈ ಬಗ್ಗೆ ಚರ್ಚಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಉ) ಅಂದಾಜು ಮೊತ್ತ 495.40 ಕೋಟಿ ರೂ.ಗಳು.

ಸಾರಾಯಿ ಮಾರಾಟದಿಂದ ಬಂದ ಆದಾಯ

272 (575) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು) ;

ಆ) ಗ್ರಾಮೀಣ ಭಾಗದಲ್ಲಿ ಬಹಳಷ್ಟು ಕುಟುಂಬಗಳು ಸಾರಾಯಿ ಸೇವನೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಸಾರಾಯಿ ಕುಡಿತದಿಂದಾಗಿ ಹಲವಾರು ಕುಟುಂಬಗಳು ಆರ್ಥಿಕವಾಗಿ ಮಾನಸಿಕವಾಗಿ ತೊಂದರೆಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕುಡಿತ ತಡೆಗಟ್ಟಲು ಗ್ರಾಮಸ್ಥರೇನಾದರೂ ಗ್ರಾಮ ಸಭೆಗಳಲ್ಲಿ ನಿರ್ಣಯಿಸಿದಲ್ಲಿ ಅಲ್ಲಿ ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?